ಕುವೆಂಪು ವಿಶ್ವವಿದ್ಯಾಲಯ
ಕುಲಸಚಿವ(ಪರೀಕ್ಷಾಂಗ)ರವರಕಛೇರಿ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – 577451
ದೂರವಾಣಿ ಸಂಖ್ಯೆ: 08282-256166:ಇ-ಮೇಲ್:regexamku@gmail.com
Re-Accredited by NAAC with 'A' Grade, Ranked 73rd Place in NIRF-2019 and Secured 45th Place in SCIMAGO Institutional Ranking

ಸಂಖ್ಯೆ:ಕುವಿ:ಪವಿ:ಘಟಿ-32: 538 :2022-23

ದಿನಾಂಕ:27-04-2022

# ಪ್ರಕಟಣೆ

ವಿಷಯ: 32ನೇ ಘಟಿಕೋತ್ಸವದಲ್ಲಿ ಪದವಿ ಪಡೆಯಲು ಅರ್ಹ ಅಭ್ಯರ್ಥಿಗಳಿಂದ ಪ್ರಮಾಣ ಪತ್ರಕ್ಕಾಗಿ ಅರ್ಜಿಗಳನ್ನು ಆಹ್ವಾನಿಸುತ್ತಿರುವ ಬಗ್ಗೆ.
ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:27-04-2022

****

ಕುವೆಂಪು ವಿಶ್ವವಿದ್ಯಾಲಯದ 32ನೇ ವಾರ್ಷಿಕ ಘಟಿಕೋತ್ಸವ ಮೇ-2022ರ ಮಾಹೆಯಲ್ಲಿ ಜರುಗಲಿದೆ. **ಮಾರ್ಚ್-2021ರ ನಂತರದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ರೆಗ್ಯೂಲರ್‌ನ** ವಿವಿಧ ಸ್ನಾತಕ /ಸ್ನಾತಕೋತ್ತರ ಪದವಿ ಡಿಪ್ಲೊಮೊ/ಪಿಹೆಚ್.ಡಿ., ಪಡೆದವರು ಹಾಗೂ ಪಿಹೆಚ್.ಡಿ. ಪದವಿಯ ಅರ್ಹ ಅಭ್ಯರ್ಥಿಗಳು ಮತ್ತು **ದೂರಶಿಕ್ಷಣದ** ಮೂಲಕ **ಆಗಸ್ಟ್-2021**ರಲ್ಲಿ ನಡೆದ ಅಂತಿಮ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಗೆ ಪದವಿ, ರ್‍ಯಾಂಕ್/ನಗದು ಬಹುಮಾನ ಪ್ರಮಾಣ ಪತ್ರಗಳನ್ನು ಈ ಘಟಿಕೋತ್ಸವದಲ್ಲಿ ಪ್ರದಾನ ಮಾಡಲಾಗುವುದು. ಈ ಮೇಲ್ಕಂಡ ವರ್ಷದಲ್ಲಿ ಪ್ರವೇಶ ಶುಲ್ಕದ ಜೊತೆಗೆ ಘಟಿಕೋತ್ಸವ ಶುಲ್ಕ ಪಾವತಿಸಿರುವ ದೂರಶಿಕ್ಷಣದ ವಿದ್ಯಾರ್ಥಿಗಳು ಹಾಗೂ ಪರೀಕ್ಷಾ ಶುಲ್ಕದ ಜೊತೆಗೆ ಘಟಿಕೋತ್ಸವ ಶುಲ್ಕ ಪಾವತಿಸಿರುವ ನಿಯಮಿತ ವಿದ್ಯಾರ್ಥಿಗಳು ಪದವಿ ಪ್ರಮಾಣ ಪತ್ರಕ್ಕಾಗಿ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸುವ ಅಗತ್ಯವಿರುವುದಿಲ್ಲ.

ಉಳಿದಂತೆ ಹಿಂದಿನ ವರ್ಷಗಳಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳು ಪದವಿ ಪ್ರಮಾಣ ಪತ್ರದ ಅರ್ಜಿಗಳನ್ನು Online ಮೂಲಕವೇ ಸಲ್ಲಿಸತಕ್ಕದ್ದು, ಇದಕ್ಕಾಗಿ ವಿಶ್ವವಿದ್ಯಾಲಯದ ವೆಬ್‌ಸೈಟ್ ವಿಳಾಸ www.kuvempu.ac.inನಲ್ಲಿ ವಿದ್ಯಾರ್ಥಿಗಳು Examination ಗೆ ಲಾಗಿನ್ ಆಗಿ Convocation Application ಎಂಬ link ಮೂಲಕ ಅರ್ಜಿಯನ್ನು ಭರ್ತಿ ಮಾಡುವುದು. ಇ-ಅರ್ಜಿಯನ್ನು Upload ಮಾಡುವ ಬಗ್ಗೆ ಸೂಚನೆಗಳನ್ನು ಸದರಿ ವೆಬ್‌ಸೈಟ್‌ನ ಲಿಂಕ್‌ನಲ್ಲಿಯೇ ನೀಡಲಾಗಿದೆ.

ಪಿಹೆಚ್.ಡಿ., ಪದವೀಧರರು ಅರ್ಜಿಯನ್ನು ನೇರವಾಗಿ Onlineನಲ್ಲಿ ವಿಶ್ವವಿದ್ಯಾಲಯದ ವೆಬ್‌ಸೈಟ್ www.kuvempu.ac.in ನೀಡಲಾಗಿರುವ ನೋಂದಣಿ ಸಂಖ್ಯೆಗಳನ್ನು ಬಳಸಿ ಅರ್ಜಿ ಸಲ್ಲಿಸಬಹುದಾಗಿದೆ.

ಅ) ಆಯಾ ಪದವಿಗಳಲ್ಲಿ ಪ್ರಥಮ ರ್‍ಯಾಂಕ್ ಪಡೆದವರಿಗೆ, ಚಿನ್ನದ ಪದಕ ಹಾಗೂ ನಗದು ಬಹುಮಾನ ವಿಜೇತರಿಗೆ ಮಾತ್ರ ಪದಕ ಹಾಗೂ ಪ್ರಮಾಣ ಪತ್ರಗಳನ್ನು ಘಟಿಕೋತ್ಸವ ವೇದಿಕೆಯ ಮೇಲೆ ಪ್ರದಾನ ಮಾಡಲಾಗುವುದು. ಇತರೆ ರ್‍ಯಾಂಕ್ ವಿಜೇತರಿಗೆ ಪದವಿ ಹಾಗೂ ರ್‍ಯಾಂಕ್ ಪ್ರಮಾಣ ಪತ್ರಗಳನ್ನು ಘಟಿಕೋತ್ಸವದ ದಿನವೇ ಖುದ್ದಾಗಿ ಘಟಿಕೋತ್ಸವ ಕಛೇರಿಯಲ್ಲಿ ವಿತರಿಸಲಾಗುವುದು.

ಆ) ರೆಗ್ಯುಲರ್ ಆಗಿ ಅಧ್ಯಯನ ಮಾಡಿರುವ ಸ್ನಾತಕ/ಸ್ನಾತಕೋತ್ತರ ಪದವೀಧರರ (ರ್‍ಯಾಂಕ್ ವಿಜೇತರನ್ನು ಹೊರತು ಪಡಿಸಿ) ಪದವಿ ಪ್ರಮಾಣ ಪತ್ರಗಳನ್ನು ಮಾತ್ರ ಘಟಿಕೋತ್ಸವದ ನಂತರ ಅವರು ಅಧ್ಯಯನ ಮಾಡಿದ ವಿಭಾಗ/ ಕಾಲೇಜುಗಳಿಗೆ ಕಳುಹಿಸಿಕೊಡಲಾಗುವುದು.

ಇ) ದೂರ ಶಿಕ್ಷಣದ ಮೂಲಕ ಸ್ನಾತಕ/ಸ್ನಾತಕೋತ್ತರ / ಇತರೆ ಕೋರ್ಸ್‌ಗಳಲ್ಲಿ ಅಧ್ಯಯನ ಮಾಡಿ ಪದವಿ ಪಡೆದವರಿಗೆ, ಪದವಿ ಪ್ರಮಾಣ ಪತ್ರಗಳನ್ನು ಆಯಾ ಅಧ್ಯಯನ ಕೇಂದ್ರಗಳಿಗೆ ಕಳುಹಿಸಿಕೊಡಲಾಗುವುದು.

**ಶುಲ್ಕದ ವಿವರಗಳು**

| ದೂರಶಿಕ್ಷಣದ ಅಭ್ಯರ್ಥಿಗಳಿಗೆ | Rs.1,300-00 | | |
|---|---|---|---|
| | ಸಾಮಾನ್ಯ | ಎಸ್.ಸಿ/ಎಸ್.ಟಿ | ಎನ್.ಆರ್.ಐ |
| ಪಿಎಚ್.ಡಿ/ಎಂ.ಫಿಲ್/ಅಭ್ಯರ್ಥಿಗಳಿಗೆ | Rs.3,410-00 | Rs.2,980-00 | Rs.5,775-00 |
| ರೆಗ್ಯುಲರ್ ಅಭ್ಯರ್ಥಿಗಳಿಗೆ | Rs.1,050-00 | Rs.925-00 | |

**ಅಭ್ಯರ್ಥಿಗಳಿಗೆ ಸೂಚನೆಗಳು**

1. ಅಭ್ಯರ್ಥಿಗಳು ಶುಲ್ಕವನ್ನು ATM DebitCard/Credit Card/Internet Banking Paytm/Pay Uನಲ್ಲಿ ನೇರವಾಗಿ ಪಾವತಿಸಬಹುದಾಗಿದೆ.
2. 32ನೇ ಘಟಿಕೋತ್ಸವ ನಡೆಯುವ ದಿನಾಂಕ, ಸಮಯ ಮತ್ತು ಸ್ಥಳದ ಬಗ್ಗೆ ಎಲ್ಲಾ ಕಾಲೇಜುಗಳಲ್ಲಿ / ಸ್ನಾತಕೋತ್ತರ ಕೇಂದ್ರಗಳಲ್ಲಿ/ದೂರಶಿಕ್ಷಣ ಅಧ್ಯಯನ ಕೇಂದ್ರಗಳಲ್ಲಿ/ ವೃತ್ತಪತ್ರಿಕೆಗಳಲ್ಲಿ ಹಾಗೂ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಮೂಲಕ ತಿಳಿಸಲಾಗುವುದು.

| | |
|---|---|
| <u>ಸಂಪರ್ಕಿಸಬೇಕಾದ ವಿಳಾಸ</u><br>ರಿಜಿಸ್ಟ್ರಾರ್(ಮೌಲ್ಯಮಾಪನ)ಕಾರ್ಯಾಲಯ<br>ಕುವೆಂಪು ವಿಶ್ವವಿದ್ಯಾಲಯ,<br>ಜ್ಞಾನ ಸಹ್ಯಾದ್ರಿ, ಶಂಕರಘಟ್ಟ– 577 451<br>ಶಿವಮೊಗ್ಗ ಜಿಲ್ಲೆ, ಕರ್ನಾಟಕರಾಜ್ಯ | ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ<br>E-mail ID: **kusconvo@gmail.com**<br>**HELP LINE**<br>**Mobile Numbers:**<br>**Under Graduate Course** 7022254997<br>**Post Graduate Course / Professional Courses/Ph.D** 7022254993<br>**Distance Mode** 7022255891<br>**For Technical Assistance** 7022255745<br>**Online Related Enquiries** 8183098138<br>8183098136 |

ಆದೇಶದ ಮೇರೆಗೆ

[signature] 28/4/22

ಕುಲಸಚಿವರು(ಮೌಲ್ಯಮಾಪನ)

**ಕುಲಸಚಿವ (ಮೌಲ್ಯಮಾಪನ)**
**ಕುವೆಂಪು ವಿಶ್ವವಿದ್ಯಾಲಯ**
**ಜ್ಞಾನಸಹ್ಯಾದ್ರಿ, ಶಂಕರಘಟ್ಟ–577 451**

ಗೆ,

<u>ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.</u>

1. ಮುಖ್ಯಸ್ಥರು, ಕುವೆಂಪು ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು, ಜ್ಞಾನಸಹ್ಯಾದ್ರಿ/ಶಿವಮೊಗ್ಗ/ಕಡೂರು.
2. ಶಿವಮೊಗ್ಗ/ಚಿಕ್ಕಮಗಳೂರು/ಚಿತ್ರದುರ್ಗ/ದಾವಣಗೆರೆ ಜಿಲ್ಲೆಗಳ ಎಲ್ಲಾ ಪ್ರಥಮದರ್ಜೆ /ಸಂಯೋಜಿತ ಹಾಗೂ ವೃತ್ತಿಪರ ಕಾಲೇಜುಗಳು
3. ಕುವೆಂಪು ವಿಶ್ವವಿದ್ಯಾಲಯದ ದೂರಶಿಕ್ಷಣದ ಎಲ್ಲಾ ಅಧ್ಯಯನ ಕೇಂದ್ರಗಳು.

ಮು. ತಿ. ನೋ.